# ಮುಳ್ಳು ಮತ್ತು ಕಣ್ಣ ಮುಂದಿನ ಕನ್ನಡಿ

ಸೂರ್ಯ
ಚಂದಿರನ ಕೈಬೆರಳು
ಹಿಡಿದು ಹೊರಡುವಾಗ
ಪಾಪಿ ನಕ್ಷತ್ರಗಳು
ಗಹಗಹಿಸಿ ನಗುತ್ತವೆ

ಎದೆಗೆ ಚುಚ್ಚಿದ
ಮುಳ್ಳನ್ನು ಕತ್ತಲಲ್ಲಿ ಕೀಳಲು
ಒಂದಿಷ್ಟು
ರಗುತ ಒಸರಬಹುದು ಎಂದೆ!

ಹೃದಯದ ವಂಚನೆಗೆ ಮುಳ್ಳು
ಅಲ್ಲೇ ಮುರಿದು ಹೋಯಿತು
ಎಂತದೋ ಹಿತ ಯಾತನೆಗೆ
ಸುಮ್ಮನಾದೆ
ಇಂದು ಇಡೀ ಹೃದಯವೇ ಬಾತಿದೆ

ಪ್ರತಿ ದಿನವೂ
ಉರಿಸಲೇ ಬೇಕು ಇರುಳು
ಇನ್ನೇನು ಕಣ್ಣ ಮುಂದಿನ
ಕನ್ನಡಿ ಚೂರು ಚೂರಾಗಬಹುದು!



● ಸುಮಿತ್ ಮೇತ್ರಿ
ಕಲೆ: ವಾಗೀಶ ಹೆಗಡೆ